## 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಕುಂದಾಪುರ

ಅಸಲು ದಾವಾ ನಂಬ್ರ: **113/2011** ಪಿಡಬ್ಲ್ಯೂ - **2**

ದಿನಾಂಕ: **27-07-2018**

ಸಾಕ್ಷಿದಾರರ ಹೆಸರು - ಬಿ.ಎನ್. ಪ್ರಕಾಶ್ ಅಡಿಗ

ತಂದೆಯ ಹೆಸರು - ಬಿ. ನಾರಾಯಣ ಅಡಿಗ

ಪ್ರಾಯ - 51 ವರ್ಷ

ಉದ್ಯೋಗ - ಖಾಸಗಿ ಉದ್ಯೋಗ

ವಾಸ - ಉಡುಪಿ

ಪ್ರಮಾಣ ವಚನ ಮಾಡಿಸಲಾಯಿತು

ಮುಖ್ಯ ವಿಚಾರಣೆ: ಮೂರನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಎಸ್. ಕೆ.ಎಸ್.ರವರಿಂದ

ನಾನು ಈ ದಾವಾದ ಸಾಕ್ಷಿದಾರನಾಗಿರುತ್ತೇನೆ.

ನಾನು ನನ್ನ ಪ್ರಮಾಣ ಪತ್ರವನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದನ್ನು ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ. ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ. ಅದನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಸಾಕ್ಷಿ ಇ .ಪಿ. ಲಾಜರಸ್ ರವರು ಮಾಡಿರುವ ವೀಲು ನಾಮೆಯನ್ನು ನಾನು ಈಗ ನೋಡುತ್ತಿದ್ದೇನೆ ಅದನ್ನು ಈಗಾಗಲೇ ನಿಡಿ೩ ಎಂದು ಗುರುತಿಸಲಾಗಿದೆ. ಸಾಕ್ಷಿ ಸ್ವದ್ರಿ ದಾಖಲೆಯಲ್ಲಿರುವ ಇ.ಪಿ. ಲಾಜರಸ್ ರವರ ಎರಡು ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಡಿ೩ ಎ ಮತ್ತು ನಿಡಿ೩ ಬಿ ಎಂದು ಗುರುತಿಸ ಲಾಯಿತು. ಸಾಕ್ಷಿ ನಿಪಿ೩ ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಡಿ೩ ಸಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಡಿ೩ ರಲ್ಲಿರುವ ಇನ್ನೊಬ್ಬ ಸಾಕ್ಷಿದಾರರಾದ ಎ. ಎಸ್. ಪ್ರತಾಪ್ ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಡಿ೩ ಡಿ ಎಂದು ಗುರುತಿಸಲಾಯಿತು.

ಪಾಟಿ ಸವಾಲು: ವಾದಿ ಪರ ವಕೀಲರಾದ ಶ್ರೀ ಎಂ. ಜೆ. ಎಸ್. ರವರಿಂದ

ಇ.ಪಿ. ಲಾಜರಸ್ ರವರಿಗೆ ಎಷ್ಟು ಜನ ಮಕ್ಕಳಿದ್ದಾರೆ ಎಂದು ಗೊತ್ತಿಲ್ಲ . ಅವರು ಸಣ್ಣ ಗೂಡಂಗಡಿಯನ್ನು

ತೆಕ್ಕಟೆಯಲ್ಲಿ ನಡೆಸುತ್ತಿದ್ದರು. ಕುಂದಾಪುರದ ಕಡೆ ಬರುವ ರಾಷ್ಟ್ರೀಯ ಹೆದ್ದಾರಿಯ ಎಡಭಾಗದಲ್ಲಿ ಅವರ ಗೂಡಂಗಡಿ ಇದೆ. ಅವರು ಮಕ್ಕಳ ಪರಿಚಯ ನನಗಿಲ್ಲ. ನಾನು ಅವರ ಗೂಡಂಗಡಿಗೆ ವಸ್ತುಗಳನ್ನು ಸರಬರಾಜು ಮಾಡಲು ಹೋಗುತ್ತಿದ್ದೆ . 1996 ರಿಂದ 1999 ರ ವರೆಗೆ ನಾನು ಅವರ ಅಂಗಡಿಗೆ ವಸ್ತುಗಳನ್ನು ಸರಬರಾಜು ಮಾಡಿರುತ್ತೇನೆ. ನನ್ನ ಪ್ರಕಾರ ಇ.ಪಿ. ಲಾಜರಸ್ ರವರು ಚಾಕಲೇಟ್, ಬಿಸ್ಕತ್ತುಗಳನ್ನು ಮಾರಾಟ ಮಾಡುವ ಅಂಗಡಿಯನ್ನು ಹೊಂದಿದ್ದರು. ವೈಯಕ್ತಿಕವಾಗಿ ನನಗೆ ಅವರು ಪರಿಚಯ ಆಗಿದ್ದರು. ನನ್ನ ಮೂಲ ಊರು ತೆಕ್ಕಟ್ಟೆಯ ಬೇಳೂರು. ಬೇಳೂರಿನಲ್ಲಿ ದೇವಸ್ಥಾನದಬೆಟ್ಟು ಎಂಬ ಸ್ಥಳವಾಗಿರುತ್ತದೆ. ನಾನು ಅವರಿಗೆ ವಸ್ತುಗಳನ್ನು ಸರಬರಾಜು ಮಾಡುವಾಗ ಪರಿಚಯ ಆಗಿರುತ್ತದೆ.

ನನಗೆ ವಾದಿಯ ಪರಿಚಯ ಇಲ್ಲ. ಇ.ಪಿ. ಲಾಜರಸ್ ರವರ ಕುಟುಂಬದ ಬಗ್ಗೆ ಅಂದರೆ ಮಕ್ಕಳ, ಹೆಂಡತಿಯ ಮತ್ತು ಅವರ ಸೊಸೆಯವರ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಅಂತೋನಿ ಲಾಜರಸ್ ರವರ ತಂದೆ ಇ.ಪಿ. ಲಾಜರಸ್ ರವರು ಯಾವುದೇ ಗೂಡಂಗಡಿಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆ ಇ.ಪಿ. ಲಾಜರಸ್ ರವರು ತಕ್ಕಟ್ಟೆ ಗ್ರಾಮದ ವಾಣಿಜ್ಯ ಸಂಕೀರ್ಣದಲ್ಲಿ ಸೈಕಲ್ ಅಂಗಡಿ ಮಾಲೀಕರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ದಾವಾದ ಮೂರನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ . ನನ್ನ ಮುಖ್ಯ ವಿಚಾರಣೆಯ ಅಫಿದಾವಿತ್ ಎಲ್ಲಿ ತಯಾರಿಸಲಾಗಿದೆ ಎಂದರೆ ಸಾಕ್ಷಿ ನನಗೆ ನ್ಯಾಯಾಲಯದಿಂದ ಬಂದ ನೋಟೀಸ್ ನಲ್ಲಿ ವಕೀಲರಾದ ಜಿ ಎಸ್ ಕೆ ಎಸ್ ಕಚೇರಿಯ ವಿಳಾಸ ಇದ್ದು ನಾನು ಅಲ್ಲಿಗೆ ಹೋಗಿದ್ದು ಅಲ್ಲಿ ನನ್ನ ಹೇಳಿಕೆಯನ್ನು ಪಡೆದು ವಕೀಲರು ತಯಾರಿಸಿ ಕೊಟ್ಟಿರುತ್ತಾರೆ. ವಕೀಲರ ಬಳಿ ಈ ವ್ಯಾಜ್ಯದ ಬಗ್ಗೆ ವಿಚಾರಿಸಿರುತ್ತೇನೆ. ಆಗ ಕೇಳಿದಾಗಲೂ ಸಹಾ ಇ.ಪಿ. ಲಾಜರಸ್ ರವರ ಮಕ್ಕಳು ಎಷ್ಟು ಎಂದು ವಿಚಾರಣೆ ಮಾಡಿದ್ದೀರಾ ಎಂದರೆ ನಾನು ನೋಟೀಸ್ ಬಂದ ಬಗ್ಗೆ ವಿಚಾರಣೆ ಮಡಿರುತ್ತೇನೆ ಅವರ ಮಕ್ಕಳ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಇ.ಪಿ. ಲಾಜರಸ್ ರವರು ನಿಡಿ೩ ರ ದಾಖಲೆ ಮಡುವಾಗ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ಇ.ಪಿ. ಲಾಜರಸ್ ರವರಿಗೆ ನನ್ನ ಸಮಕಾಲೀನ ಪ್ರಾಯವಾ ಎಂದರೆ ಸಾಕ್ಷಿ ನನ್ನ ಸಮಕಾಲೀನ ಪ್ರಾಯ ಅಲ್ಲ ಎಂದು ನುಡಿಯುತ್ತಾರೆ. ನಿಡಿ೩ ಆಗಿದೆ ಎನ್ನುವ ಸಮಯದಲ್ಲಿ ಇ.ಪಿ. ಲಾಜರಸ್ ರವರು ಎಲ್ಲಿ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. ಮುಉರನೇ ಪ್ರತಿವಾದಿಯ ಬಳಿ ವೀಲು ಆದ ಬಗ್ಗೆ ನಾನು ಮಾಹಿತಿ ನೀಡಿರುವುದಿಲ್ಲ. ನಾನು ಮಾರನೇ ಪ್ರತಿವಾದಿಯ ಬಳಿ ನಾನು ಶಿವಮೊಗ್ಗ ಜಿಲ್ಲೆಯ ಸಾಗರದವನು ಎಂದು ಮಾಹಿತಿ ನೀಡಿರುವುದಿಲಲ. ನಾನು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯನು. ನಿಡಿ೩ ರ ದಾಖಲ ಆಗಿದೆ ಎನ್ನಲಾದ ಸಮಯದಲ್ಲಿ ನನ್ನ ಎಲ್ಲಾ

ದಾಖಲೆಗಳಲ್ಲಿ ನಾನು ತೀರ್ಥಹಳ್ಳಿಯ ದೇವಂಗಿ ಗ್ರಾಮದ ನಿವಾಸಿ ಎಂದು ನಮೂದಾಗಿತ್ತು. ತೆಕ್ಕಟ್ಟೆ ಯಿಂದ ದೇವಂಗಿ ಗ್ರಾಮ 120 ಕಿ ಮಿ ಅಂತರದಲ್ಲಿದೆ. ನಾನು ಇ. ಪಿ. ಲಾಜರಸ್ ರವರ ಸಮಕಾಲೀನ ಅಲಲ, ಆತ್ಮೀಯರಲ್ಲ. ಸ್ನೇಹಿತನಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮದು ವ್ಯವಹಾರದ ಸಂಬಂಧವಾಗಿರುತ್ತದೆ. ಇ. ಪಿ. ಲಾಜರಸ್ ರವರಿಗೆ ತೆಕ್ಕಟ್ಟೆ ಮತ್ತು ಮಣೂರಿನಲ್ಲಿ ಅವರ ಸಮಕಾಲೀನರು, ಸ್ನೇಹಿತರು, ಆತ್ಮೀಯರು, ಸಂಬಂಧಿಗಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಇ. ಪಿ. ಲಾಜರಸ್ ರವರು ವ್ಯವಹಾರ ಮಾಡುತ್ತಿದ್ದರು ಎನ್ನಲಾದ ಸ್ಥಳ ಕುಂದಾಪುರದ ಸಮೀಪದಲ್ಲಿದೆ ಎಂದರೆ ಸರಿ . ಇ. ಪಿ. ಲಾಜರಸ್ ರವರು ವ್ಯವಹಾರ ಮಾಡುತ್ತಿದ್ದ ಅಂಗಡಿಗೆ ಸಂಬಂಧಿಸಿದಂತೆ ಕುಂದಾಪುರ ನ್ಯಾಯಾಲಯದಲ್ಲಿ ಒಂದು ವ್ಯಾಜ್ಯ ಇದ್ದು ಅದಕ್ಕೆ ಶ್ರೀ ಎ. ಬಿ. ಎಸ್. ರವರು ಅವರ ಪರ ವಕೀಲರಾಗಿದ್ದರು ಎಂದು ನನಗೆ ಗೊತ್ತಿಲ್ಲ. ಕುಂದಾಪುರದಲ್ಲಿ ಅವರಿಗೆ ದಾಖಲೆ ಬರಹಗಾರರು ಮತ್ತು ವಕೀಲರು ಪರಿಚಯ ಇದ್ದರು ಎಂದರೆ ನನಗೆ ಗೊತ್ತಿಲ್ಲ.

ನಿಡಿ೩ ರ ದಾಖಲೆಯನ್ನು ಉಡುಪಿಯ ವಕೀಲರಾದ ಶ್ರೀ ವಿಶ್ವನಾಥ ಶೆಟ್ಟಿ ರವರು ತಯಾರು ಮಾಡಿರುತ್ತಾರೆ ಅವರ ಕಚೇರಿ ಉಡುಪಿ ನ್ಯಾಯಾಲಯದ ಎದುರುಗಡೆ ಇರುತ್ತದೆ. ನಿಡಿ೩ ಆಗಿದೆ ಎನ್ನುವ ದಿನ ನಾನು ವಕೀಲರ ಕಚೇರಿಗೆ ಹೋಗುವುದಕ್ಕಿಂತ ಮೊದಲು ಇ. ಪಿ. ಲಾಜರಸ್ ರವರು ಅಲ್ಲಿ ಹಾಜರಿದ್ದರು. ನಾನು ವಕೀಲರ ಕಚೇರಿಗೆ ಹೋಗುವ ಮೊದಲು ಎಷ್ಟು ದಿನದ ಮುಂಚೆ ನಿಡಿ೩ ರ ದಾಖಲೆ ತಯಾರಿದೆ ಎಂದು ನನಗೆ ಗೊತ್ತಿಲ್ಲ. ನಾನು ಆ ದಿನ ಮದ್ಯಾಹ್ನ 3-00 ರಿಂದ 4-00 ಗಂಟೆ ಸಮಾರಿಗೆ ವಕೀಲರ ಕಚೇರಿಗೆ ಹೋಗಿರುತ್ತೇನೆ. ನಾನು ಹೋದಾಗ ವಕೀಲರು ನ್ಯಾಯಾಲಯಕ್ಕೆ ಹೋಗಿದ್ದರು, ವಕೀಲರ ಸಹಾಯಕರು ಕಚೇರಿಯಲ್ಲಿ ಇದ್ದರು ನಾವು ಅರ್ದ ಗಂಟೆಗಳ ಕಾಲ ದಾದಿರುತ್ತೇವೆ ಆಗ ವಕೀಲರು ಬಂದಿರುತ್ತಾರೆ. ವಕೀಲರು ಬಂದ ಕೂಡಲೇ ವಕೀಲರ ನನ್ನ ಸಹಿ ಪಡೆಯುವಂತೆ ಹೇಳಿರುತ್ತಾರೆ ನಾನು ನಿಡಿ೩ ರ ದಾಖಲೆಗೆ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡುವುದಕ್ಕಿಂತ ಮೊದಲು ವಕೀಲುರ ಷದ್ರಿ ದಾಖಲೆಯನ್ನು ಎಲ್ಲಿ ಇಟ್ಟಿದ್ದರು ಎಂದು ನಾನು ಗಮನಿಸಿರುವುದಿಲ್ಲ. ನಾನು ನಿಡಿ೩ ರ ದಾಖಲೆಗೆ ಸಹಿ ಮಾಡುವಾಗ ವಿಶ್ವನಾಥ ಶೆಟ್ಟಿ ಹಾಗೂ ಅವರ ಜೊತೆ ಮೂರು ನಾಲ್ಕು ಜನ ಅವರ ಸಹಾಯಕರು ಇದ್ದರು. ಇ. ಪಿ. ಲಾಜರಸ್ ರವರು ನಿಡಿ೩ ರ ದಾಖಲೆಗೆ ಸಹಿ ಮಾಡಿದಂರು ನಂತರ ವಕೀಲರು ನನಗೆ ಸಹಿ ಮಾಡಲು ತೋರಿಸಿದರು ನಾನು ಸಹಿ ಮಾಡಿರುತ್ತೇನೆ. ಸಹಿ ಮಾಡಿದ ಕೂಡಲೇ ನಾನು ಅಲ್ಲಿಂದ ಹೊರಟು ಹೋಗಿರುತ್ತೇನೆ. ಆ ಸಮಯದಲ್ಲ ಬೇರೆ ಯಾರೂ ನನ್ನ ಒಟ್ಟಿಗೆ ಅಲ್ಲಿ ಇರಲಿಲ್ಲ. ವಕೀಲರಾದ ವಿಶ್ವನಾಥ ಶೆಟ್ಟಿ ರವರು ನಿಡಿ೩ ರ ದಾಖಲೆಗೆ ಸಹಿ ಮಾಡಿದ್ದಾರಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. ವಿಶ್ವನಾಥ ಶೆಟ್ಟಿ ರವರು ನಿಡಿ೩ ಅನ್ನು ಯಾವಾಗ ತಯಾರಿಸಿ ಇಟ್ಟಿರುತ್ತಾರೆಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಹಾಗೂ ನಿಡಿ೩ ರ

ದಾಖ್ಲೆಯನ್ನು ಯಾರ ಮಾಹಿತಿ ಮೇರೆಗೆ ತಯಾರಿಸಿರುತ್ತಾರೆಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ನಿಡಿ೩ ರ ದಾಖ್ಲೆಯನ್ನು ಯಾರ ಮಾಹಿತಿ ಪ್ರಕಾರ ತಯಾರಿಸಲಾಗಿದೆ ಎಂದು ಗೊತ್ತಿಲ್ಲ ಎಂದು ನನ್ನ ಮುಖ್ಯ ವಿಚಾರಣಾ ಅಫಿದಾವಿತ್ ತಯಾರಿಸುವಾಗ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

ನನಗೆ ಎ ಎಸಿ ಪ್ರತಾಪ್ ರವರ ಪರಿಚಯ ಇಲ್ಲ. ಸಾಕ್ಷಿ ಮುಂದುವರಿದು ನಾನು ನಿಡಿ೩ ರ ದಾಖಲೆಗೆ ಸಹಿ ಮಾಡುವಾಗ ಕಚೇರಿಯಲ್ಲಿ ಅವರೂ ಸಹಾ ಸಹಿ ಮಾಡಿರುತ್ತಾರೆ, ಆಗ ಎ. ಎಸ್. ಪ್ರತಾಪ್ ಎಂದು ಗೊತಾಯಿತು ಎಂದು ನುಡಿಯುತ್ತಾರೆ. ಅವರು ಯಾವ ಊರಿನವರು ಮತ್ತು ಏನು ಉದ್ಯೋಗ ಎಂದು ಗೊತ್ತಿಲ್ಲ. ಎ ಎಸ್ ಪ್ರತಾಪ್ ರವರಿಗೆ ಅಂದಾಜು 25 ರಿಂದ 30 ವರ್ಷ ಆಗಿರಬಹುದು ಅದನ್ನು ನಾನು ಊಹಿಸಿ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಅವರು ಇ ಪಿ ಲಾಜರಸ್ ರವರ ಸಮಕಾಲೀನರಾಗಲೀ, ಸಂಬಂಧಿಯಾಗಲೀ, ಆತ್ಮೀಯರಾಗಲೀ, ಸ್ನೇಹಿತರಾಗಲೀ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಇ ಪಿ ಲಾಜರಸ್ ರವರ ಮಾತೃಭಾಷೆ ಯಾವುದು ಎಂದು ಗೊತ್ತಿಲ್ಲ ಅವರು ಕನ್ನಡದಲ್ಲಿ ಮಾತನಾಡುತ್ತಿದ್ದರು  ಎಂದು ನುಡಿಯುತ್ತಾರೆ.

ಇ ಪಿ ಲಾಜರಸ್ ರವರ ಸರವರಿಗೆ ಅವರ ಮಕ್ಕಳಾದ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಮೇಲೆ ಪ್ರೀತಿ ಇದ್ದು ಅವರೊಂದಿಗೆ ಅನ್ಯೋನ್ಯವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಡಿ೩ ರ ದಾಖಲೆ ಯಾರ ಪರವಾಗಿ ಮತ್ತು ಯಾವ ಉದ್ದೇಶಕ್ಕಾಗಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಇ ಪಿ ಲಾಜರಸ್ ರವರಿಗೆ ವಸ್ತುಗಳನ್ನು ಸರಬರಾಜು ಮಾಡಿದ ಬಗ್ಗೆ ದಾಖಲೆ ಇರುತ್ತದೆ ಅದು ಹಳೆಯದಾದ ಕಾರಣ ಈಗ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಬಿಸ್ಕತ್ತು ಅಥವಾ ಚಾಕಲೇಟ್ ಕಂಪೆನಿಯವರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮುಂಚೆ ಬೇರೆ ಕಂಪೆನಿಯಲ್ಲಿದ್ದೆ ಎಂದು ನುಡಿಯುತ್ತಾರೆ. ಮೂರನೇ ಪ್ರತಿವಾದಿ ಉಡುಪಿಯಲ್ಲಿ ಒಂದು ಕೈಗಾರಿಕಕೆಯ ಮಾಲೀಕರಾಗಿರುತ್ತಾರೆ ಎದಂರೆ ಸಾಕ್ಷಿ ಆ ವಿಷಯವನ್ನು ಕೇಳಿ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಆ ಕಾರಣದಿಂದಾಗಿ ಮೂರನೇ ಪ್ರತಿವಾದಿ ನನಗೆ ಆತ್ಮೀಯರು ಮತ್ತು ಸ್ನೇಹಿತರು ಎಂದರೆ ಸರಿಯಲ್ಲ. ಮೂರನೇ ಪ್ರತಿವಾದಿ ಮತ್ತು ಅವರ ಕಡೆಯವರು ಪರಸ್ಪರ ಶಾಮೀಲಾಗಿ ಇ ಪಿ ಲಾಜರಸ್ ರವರ ಹೆಸರಿನಲ್ಲಿ ಒಂದು ನಿಡಿ೩ ರ ಒದು ಸುಳ್ಳು ಮತ್ತು ಫೋರ್ಜರಿ ದಾಖಲೆಯನ್ನು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಇ ಪಿ ಲಾಜರಸ್ ರವನ್ನು ನೋಡಿದ್ದೂ ಇಲ್ಲ ಮತು ಅವರ ಪರಿಚಯ ಇಲಲ ಎಂದರೆ ಸರಿಯಲ್ಲ. ನಿಡಿ೩ ರ ದಾಖಲೆ ಆಗುವಾಗ ಮೂರನೇ ಪ್ರತಿವಾದಿ ತಂದೆ ಇ ಪಿ ಲಾಜರಸ್ ರವರು ಮಾನಸಿಕವಾಗಿ ಸರಿ ಇರಲಿಲ್ಲ ಎಂದರೆ ಸಾಕ್ಷಿ ಅವರು ಮಾನಸಿಕವಾಗಿ ಸರಿ ಇದ್ದರು ಎಂದು ನುಡಿಯುತ್ತಾರೆ. ಆಗ ಇ ಪಿ ಲಾಜರಸ್ ರವರವರಿಗೆ 80 ರಿಂದ 85 ವರ್ಷ ಪ್ರಾಯ ಎಂದರೆ ನನಗೆ ಗೊತ್ತಿಲ್ಲ. ಅವರು ಆ ಸಮಯದಲ್ಲಿ

ವಯೋಮಾ ಸಂಬಂಧಿ ಕಾಯಿಲೆಯಿಂದ ನರಳುತ್ತಿದ್ದರು ಮತ್ತು ಅವರು ಕುಗ್ಗಿದ್ದರು ಎಂದರೆ ಸರಿಯಲ್ಲ. ನಾನು ಈ ಹಿಂದೆ ಮುಂಬೈನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಮೂರನೇ ಪ್ರತಿವಾದಿ ಸಹಾ ಮುಂಬೈನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಎ.ಎಸ್ ಪ್ರತಾಪ್ ರವರು ಮೂರನೇ ಪ್ರತಿವಾದಿಯ ಅತ್ಮೀಯ ಸ್ನೇಹಿತ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ಇ ಪಿ ಲಾಜರಸ್ ರವರ ಸಹಿ ನಿಡಿ೩ ರ ದಾಖಲೆಯಲ್ಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯತಂದೆ ಇ ಪಿ ಲಾಜರಸ್ ರವರಿಗೆ ಅವರ ಎಲ್ಲಾ ಮಕ್ಕಳು ಮತ್ತು ಪತ್ನಿಯ ಮೇಲೆ ಪ್ರೀತಿ ಇರುವುದರಿಂದ ನಿಡಿ೩ ರಲ್ಲಿ ಹೇಳಿದ ವ್ಯಕ್ತಿಯ ಪರವಾಗಿ ಅವರಿಗೆ ವೀಲುನಾಮೆ ಮಾಡುವ ಉದ್ದೇಶ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮೂರನೇ ಪ್ರತಿವಾದಿಯ ಒತ್ತಡಕ್ಕೆ ಬಲಿಯಾಗಿ ಇತ್ತೀಚೆಗೆ ತಯಾರಾದ ನಿಡಿ೩ ರ ಸುಳ್ಳು ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ೩ ರ ದಾಖಲೆ ಯಾವ ಕಾರಣಕಾಗಿ ನೋಂದಣಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೂನರೇ ಪ್ರತಿವಾದಿಯೇ ನನ್ನನ್ನು ವಕೀಲರ ಕಚೇರಿಗೆ ಕರೆದುಕೊಂಡು ಹೋಗಿ ಅಪಿದಾವಿತ್ ಅನ್ನು ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನೇ ಖುದ್ದಾಗಿ ವಕೀಲರ ಕಚೇರಿಗೆ ಹೋಗಿರುತ್ತೇನೆಂದು ನುಡಿಯುತ್ತಾರೆ. ನಿಡಿ೩ ಒಂದು ಪೋರ್ಜರಿ ದಾಖಲೆ ಆಗಿದ್ದು ಅದು ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ.ಎಸ್. ಪ್ರತಾಪ್ ಎಂಬ ವ್ಯಕ್ತಿ ನಿಡಿ೩ ರ ದಾಖಲೆಗೆ ನನ್ನ ಸಮಕ್ಷಮ ಸಹಿ ಮಾಡಿದ್ದಾರೆಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ